ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೪
ಸಂಚಿಕೆ : ೦೨ ೧೨ (ಖಾಸಗಿ ಪ್ರಸಾರಕ್ಕಾಗಿ ಮಾತ್ರ) ಅಕ್ಟೋಬರ್ – ಡಿಸೆಂಬರ್ ೨೦೦೯ ಸಂಪಾದಕರು ಎಸ್.ವಿ. ಶ್ರೀನಿವಾಸರಾವ್


ಪರಿವಿಡಿ

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ : ೨೬೬೧೫೮೭೭/೨೬೬೭೬೭೭೩
ಇಮೇಲ್: bmsritrust@gmail.com
ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ

ಶುಭಾಶಯಗಳು – ಅಭಿನಂದನೆಗಳು

ಪ್ರತಿಷ್ಠಾನದ ಸರ್ವಸದಸ್ಯರುಗಳಿಗೆ ಹೊಸ ವರ್ಷಕ್ಕೆ ಹಾಗೂ ಮಕರ ಸಂಕ್ರಾಂತಿಗೆ ಹಾರ್ದಿಕ ಶುಭಾಶಯಗಳು

ಕರ್ನಾಟಕ ಮುಖ್ಯಮಂತ್ರಿ ಡಾ.ಬಿ.ಎಸ್. ಯಡ್ಯೂರಪ್ಪ ಅವರೊಡನೆ ಭೇಟಿ:



ದಿನಾಂಕ: ೧೬–೧೨–೨೦೦೯ರಂದು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಮಾನ್ಯ ಸದಸ್ಯರುಗಳಾದ ಡಾ. ಚಿದಾನಂದಮೂರ್ತಿ, ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರೊ.ಎಲ್.ಎಸ್. ಶೇಷಗಿರಿರಾವ್, ಪ್ರತಿಷ್ಠಾನದ ಅಧ್ಯಕ್ಷ ಡಾ. ಪಿ.ವಿ. ನಾರಾಯಣ, ಕಾರ್ಯದರ್ಶಿಗಳಾದ ಶ್ರೀ ಎಸ್.ವಿ.ಶ್ರೀನಿವಾಸರಾವ್, ಡಾ. ನಾ. ಗೀತಾಚಾರ್ಯ ಇವರುಗಳ ನಿಯೋಗ ಮುಖ್ಯಮಂತ್ರಿ ಡಾ. ಬಿ.ಎಸ್. ಯಡ್ಯೂರಪ್ಪ ಅವರನ್ನು ಕೃಷ್ಣ ಗೃಹಕಚೇರಿಯಲ್ಲಿ ಬೆಳಿಗ್ಗೆ ಭೇಟಿಮಾಡಿ, 'ಕನ್ನಡದ ಕಣ್ವ' ಬಿ.ಎಂ.ಶ್ರೀಕಂಠಯ್ಯ ಅವರ ಹೆಸರಿನಲ್ಲಿ ಪ್ರೊ. ಎಂ.ವಿ.ಸೀತಾರಾಮಯ್ಯ ಅವರು ಸುಮಾರು ೩೧ ವರ್ಷಗಳ ಹಿಂದೆ ಸ್ಥಾಪಿಸಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸರ್ವತೋಮುಖ ಅಭಿವೃದ್ಧಿಗಾಗಿ, ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ತಯಾರಿಸಿರುವ ಮನವಿಯನ್ನು ಈ ನಿಯೋಗದ ಪರವಾಗಿ ಪ್ರೊ. ಜಿ. ವೆಂಕಟಸುಬ್ಬಯ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು. ಡಾ. ಚಿದಾನಂದಮೂರ್ತಿ ಮತ್ತು ಡಾ.ಪಿ.ವಿ. ನಾರಾಯಣ ಮನವಿಯಲ್ಲಿನ ಮುಖ್ಯಾಂಶಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಪ್ರತಿಷ್ಠಾನದ ಸಾಹಿತ್ಯಿಕ ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಗಳ ಅಭಿವೃದ್ಧಿಗಾಗಿ ಬೇಕಾಗಿರುವ ೧.೨೫ ಕೋಟಿ ರೂಪಾಯಿಯ ಬೇಡಿಕೆಯನ್ನು ಮಂಡಿಸಿದರು. ಶಾಂತವಾಗಿ ಎಲ್ಲವನ್ನೂ ಆಲಿಸಿದ ಮುಖ್ಯಮಂತ್ರಿಗಳು ಪ್ರತಿಷ್ಠಾನ ಸಾಧಿಸಿರುವ ಪ್ರಗತಿಯನ್ನೂ ಮನಗಂಡು ಮುಂದಿನ ಯೋಜನೆಗಳನ್ನೂ ಮೆಚ್ಚಿ, ಬಹಳ ವಿಶ್ವಾಸದಿಂದ ೫೦ ಲಕ್ಷ ರೂಪಾಯಿಗಳ ಅನುದಾನವನ್ನು ಘೋಷಿಸಿದರು. ಪ್ರಥಮ ಕಂತಾಗಿ ೨೫ ಲಕ್ಷ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಲು, ಉಳಿದ ೨೫ ಲಕ್ಷ ರೂಪಾಯಿಗಳನ್ನು, ಮುಂದಿನ ವರ್ಷ ನೀಡಲು ಅಧಿಕಾರಿಗಳಿಗೆ ಆದೇಶ ನೀಡಿದರು. ಪ್ರತಿಷ್ಠಾನದ ದೈನಂದಿನ ಚಟುವಟಿಕೆಗಳನ್ನು ಮೆಚ್ಚಿದ ಮುಖ್ಯಮಂತ್ರಿಗಳು ಪ್ರತಿಷ್ಠಾನಕ್ಕೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನ ೫ ಲಕ್ಷವನ್ನು ಹೆಚ್ಚಿಸಲೂ ಆಶ್ವಾಸನೆ ನೀಡಿದರು.

ಈ ಸಾಹಿತಿಗಳ ನಿಯೋಗವನ್ನು ಬಹಳ ಪ್ರೀತಿ ವಿಶ್ವಾಸದಿಂದ ಕಂಡು, ಬೇಡಿಕೆಗಳಿಗೆ ಸ್ಪಂದಿಸಿದ ಕರ್ನಾಟಕದ ಜನಪ್ರಿಯ ಮುಖ್ಯಮಂತ್ರಿ ಡಾ. ಬಿ.ಎಸ್. ಯಡ್ಯೂರಪ್ಪ ಅವರಿಗೆ ಪ್ರತಿಷ್ಠಾನ ಗೌರವ ಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತದೆ ಹಾಗೂ ಹೊಸವರ್ಷಕ್ಕೆ ಶುಭಕೋರುತ್ತದೆ. ಮಕರ ಸಂಕ್ರಾಂತಿ ರಾಜ್ಯ ಸರ್ಕಾರಕ್ಕೆ ಶುಭತರಲಿ ಎಂದೂ ಆಶಿಸುತ್ತದೆ. □

ಸಂಪಾದಕೀಯ..............



ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಹಮ್ಮಿಕೊಂಡಿರುವ ಎಂ.ವಿ.ಸೀತಾರಾಮಯ್ಯ ಶತಮಾನೋತ್ಸವ ಕಾರ್ಯಕ್ರಮಗಳು ಅಭೂತಪೂರ್ವ ರೀತಿಯಲ್ಲಿ ಸಂಭ್ರಮದಿಂದ ದೇಶಾದ್ಯಂತ ನಡೆಯುತ್ತಿವೆ. ಸಂಘ-ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ/ತಾಲ್ಲೂಕು ಘಟಕಗಳು ಬಹಳ ಉತ್ಸಾಹದಿಂದ ಈ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ಇದು ಜನತೆ ಬಿ.ಎಂ.ಶ್ರೀ ಹಾಗೂ ಎಂ.ವಿ.ಸೀ ಅವರುಗಳ ಮೇಲೆ ಇರಿಸಿಕೊಂಡಿರುವ ಗೌರವ, ಪ್ರೀತಿ ವಿಶ್ವಾಸವನ್ನು ಪ್ರತಿಮಿಸುತ್ತದೆ. ದೆಹಲಿ, ಮುಂಬಯಿ, ಮದ್ರಾಸ್ ಮುಂತಾದ ಹೊರ ಪ್ರಾಂತಗಳಲ್ಲೂ ಕಾರ್ಯಕ್ರಮಗಳು ನಡೆಯುತ್ತಿವೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಹ ಎಂ.ವಿ.ಸೀ ಸಭಾಂಗಣದಲ್ಲಿ ಪ್ರತಿ ತಿಂಗಳೂ ೯ನೇ ದಿನಾಂಕ ಎಂ.ವಿ.ಸೀ ಬಗ್ಗೆ ಒಂದೊಂದು ಕಾರ್ಯಕ್ರಮವನ್ನು ನಗರದ ಇತರ ಸಂಘ ಸಂಸ್ಥೆಗಳ ಸಹಯೋಗದೊಡನೆ ನಡೆಸುತ್ತಿದೆ. ಈ ಕಾರ್ಯಕ್ರಮಗಳನ್ನು ರೂಪಿಸಿ ನಡೆಸಿಕೊಂಡು ಬರಲು ಶ್ರೀ ರಾ.ನಂ. ಚಂದ್ರಶೇಖರ್ ಮತ್ತು ಶ್ರೀ ಶ್ರದೇ ಪಾರ್ಶ್ವನಾಥ್ ಅವರುಗಳು ಮುಂದೆ ಬಂದಿರುವುದು ಬಹಳ ಸಂತಸದ ಸಂಗತಿ. ಅವರಿಗೆ ನಮ್ಮ ಹಾರ್ದಿಕ ಕೃತಜ್ಞತೆ ಸಲ್ಲುತ್ತದೆ.

ಪ್ರತಿಷ್ಠಾನದೊಡನೆ ಸಂಪರ್ಕ ಬೆಳೆಸಿರುವ ಸಂಘ, ಸಂಸ್ಥೆಗಳು, ಕ.ಸಾ.ಪ ಘಟಕಗಳು ಮಡಿಕೇರಿ, ಮೈಸೂರು, ತುಮಕೂರು, ಚಿತ್ರದುರ್ಗ, ಹುಳಿಯಾರು, ಬೆಳಗೆರೆ, ವಾಣಿವಿಲಾಸ ಕಂಕರೆ ಮುಂತಾದೆಡೆ ಎಂ.ವಿ.ಸೀ ಬಗ್ಗೆ ಕಾರ್ಯಕ್ರಮ ನಡೆಸಿರುವುದಲ್ಲದೆ ಹಸ್ತಪ್ರತಿ ಪ್ರದರ್ಶನಕ್ಕೂ ಸೂಕ್ತ ಏರ್ಪಾಡು ಮಾಡಿವೆ - ಎಲ್ಲೆಡೆ ಒಳ್ಳೆಯ ಸ್ವಾಗತಾರ್ಹ ಪ್ರತಿಕ್ರಿಯೆ ಕಂಡುಬಂದಿದೆ. ನೂರಾರು ವಿದ್ಯಾರ್ಥಿಗಳೂ, ಹಾಗೂ ಸಾಹಿತ್ಯಾಸಕ್ತರು ಹಸ್ತಪ್ರತಿ ಪ್ರದರ್ಶನವನ್ನು ಆಸಕ್ತಿಯಿಂದ ವೀಕ್ಷಿಸಿ, ಮಾಹಿತಿಯನ್ನು ಪಡೆದಿರುತ್ತಾರೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಿರುವ ಹಿನ್ನೆಲೆಯಲ್ಲಿ ಪ್ರಾಚೀನ ಕನ್ನಡ (ಹಳಗನ್ನಡ)ದ ಮೇಲೆ ಜನರಲ್ಲಿ ಆಸಕ್ತಿ ಉದಯಿಸಿದೆ. ಶಾಸ್ತ್ರೀಯವಾಗಿ ಹಳಗನ್ನಡವನ್ನು ಅಭ್ಯಸಿಸಲು ಆಸಕ್ತರು ಧಾವಿಸಿ ಪ್ರತಿಷ್ಠಾನಕ್ಕೆ ಬರುತ್ತಿದ್ದಾರೆ ಈ ವಿಶಿಷ್ಟ ಕಲಿಕೆಯ ಅವಕಾಶವನ್ನು ಉತ್ಸಾಹಿಗಳಿಗೆ ಒದಗಿಸಿಕೊಡುವ ಸಲುವಾಗಿ ಪ್ರತಿಷ್ಠಾನ ಸ್ನಾತಕೋತ್ತರ ಡಿಪ್ಲೋಮಾ ತರಗತಿಗಳನ್ನು ಪದವೀಧರರಿಗಾಗಿ ಆಯೋಜಿಸುತ್ತಿದೆ. ಈ ಬಗ್ಗೆ ಹಂಪಿ ವಿಶ್ವವಿದ್ಯಾನಿಲಯದ ಮಾನ್ಯತೆ ಸಹ ಪಡೆಯಲು ಪ್ರಯತ್ನ ನಡೆದಿದೆ.

ಎಂ.ವಿ.ಸೀತಾರಾಮಯ್ಯ ಅವರು ಬಹಳ ಆಸಕ್ತಿಯಿಂದ ಸಂಗ್ರಹಿಸಿದ್ದ ಹಸ್ತಪ್ರತಿಗಳು ಈಗ ೩೦೦೦ಕ್ಕೂ ಹೆಚ್ಚು ಸಂಗ್ರಹಿತವಾಗಿ ಇದಕ್ಕಾಗಿಯೇ ರಚಿತಗೊಂಡಿರುವ ಪ್ರತ್ಯೇಕ ಹಸ್ತಪ್ರತಿ ಭಂಡಾರದಲ್ಲಿ ಸ್ಥಾಪಿತಗೊಂಡಿದ್ದು, ವಿದ್ಯಾರ್ಥಿಗಳು ಹಾಗೂ ಆಸಕ್ತರಿಗೆ ಸಂದರ್ಶನೀಯ ಸ್ಥಳವಾಗಿ ಮಾರ್ಪಟ್ಟಿದೆ. ಈ ಮೌಲ್ಯಾಧಾರಿತ ಓಲೆಗರಿಗಳನ್ನು, ಹಸ್ತಪ್ರತಿಗಳನ್ನು ಸಂರಕ್ಷಿಸುವ, ಸಂಪಾದಿಸುವ ಅಗತ್ಯವನ್ನು ಜನಸಾಮಾನ್ಯರಿಗೆ ತಿಳಿಸುವ ಸಲುವಾಗಿ ಈ ಹಸ್ತಪ್ರತಿಗಳನ್ನು ಪ್ರತಿಯೊಂದು ಕಾರ್ಯಕ್ರಮ ನಡೆಯುವಲ್ಲಿ ಪ್ರದರ್ಶಿಸುತ್ತಿದ್ದೇವೆ ಹಾಗೂ ಈ ಬಗ್ಗೆ ಪೂರ್ಣ ಮಾಹಿತಿ ನೀಡುತ್ತಿದ್ದೇವೆ.

ಬಿ.ಎಂ.ಶ್ರೀ ಅವರ ಹುಟ್ಟೂರಾದ ತುಮಕೂರು ಜಿಲ್ಲೆಯ ಸಂಪಿಗೆಯಲ್ಲಿ ಒಂದು ಬಿ.ಎಂ.ಶ್ರೀ ಸ್ಮಾರಕ ಭವನ ನಿರ್ಮಾಣಗೊಂಡಿದ್ದು ಅದರ ಉದ್ಘಾಟನೆ ದಿನಾಂಕ: ೦೩-೧೨-೨೦೦೯ರಂದು ಅದ್ದೂರಿಯಾಗಿ ಸರಕಾರ ನೆರವೇರಿಸಿದೆ. ಬಿ.ಎಂ.ಶ್ರೀ ಹಾಗೂ ಎಂ.ವಿ.ಸೀ ಅವರ ಹೆಸರು ಇದ್ದೆಡೆ ನಮ್ಮ ಪ್ರತಿಷ್ಠಾನ ಉಪಸ್ಥಿತವಿರುತ್ತದೆ. ಕಾರ್ಯಚಟುವಟಿಕೆಗಳನ್ನು ಅಲ್ಲೆಲ್ಲಾ ನಡೆಸಬಯಸುತ್ತದೆ ಎಂದು ತಿಳಿಸಬಯಸುತ್ತೇವೆ.

■ **ಎಸ್.ವಿ. ಶ್ರೀನಿವಾಸರಾವ್**
ಸಂಪಾದಕರು

ಪ್ರತಿಷ್ಠಾನದ ವಾರ್ತೆ

ಎಂ.ವಿ.ಸೀ. ಶತಮಾನೋತ್ಸವ ತಿಂಗಳ ಕಾರ್ಯಕ್ರಮಗಳು



೦೯-೧೦-೨೦೦೯ ಶುಕ್ರವಾರ ನಡೆದ ಎಂ.ವಿ.ಸೀ. ಶತಮಾನೋತ್ಸವ ತಿಂಗಳ ಉಪನ್ಯಾಸಮಾಲೆ - ೧

ದಿನಾಂಕ: ೦೯-೧೦-೨೦೦೯ರಂದು ಶತಮಾನೋತ್ಸವ ತಿಂಗಳ ಉಪನ್ಯಾಸಮಾಲೆಯ ಮತ್ತು ವರ್ಷವಿಡಿ ಪ್ರಾಚೀನ ಹಸ್ತಪ್ರತಿ ಪ್ರದರ್ಶನಗಳ ಉದ್ಘಾಟನಾ ಸಮಾರಂಭ ಪ್ರತಿಷ್ಠಾನದಲ್ಲಿ ನಡೆಯಿತು. ಹಸ್ತಪ್ರತಿ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಬೇಕಾಗಿದ್ದ ಶಾಸಕ ಶ್ರೀ ರವಿ ಸುಬ್ರಹ್ಮಣ್ಯ ಅವರ ಅನುಪಸ್ಥಿತಿಯಲ್ಲಿ ಈ ಕಾರ್ಯಕ್ರಮವನ್ನು ಡಾ. ಚಿದಾನಂದಮೂರ್ತಿ ಅವರೇ ನೆರವೇರಿಸಿದರು. ಶ್ರೀ ರಾ.ನಂ. ಚಂದ್ರಶೇಖರ್ **'ಎಂ.ವಿ.ಸೀ ಮತ್ತು ಕನ್ನಡ ಜಾಗೃತಿ'** ಕುರಿತು ಭಾಷಣ ಮಾಡಿದರು. ಡಾ. ಪಿ.ವಿ. ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶ್ರ.ದೇ.ಪಾರ್ಶ್ವನಾಥ ಅವರು ಕಾರ್ಯಕ್ರಮ ನಿರೂಪಿಸಿದರು.

ದಿನಾಂಕ: ೦೯-೧೧-೨೦೦೯ರಂದು ತಿಂಗಳ ಉಪನ್ಯಾಸಮಾಲೆ - ೨ ಖ್ಯಾತ ಸಂಶೋಧಕ ಡಾ. ಸೂರ್ಯನಾಥ ಕಾಮತ್ ಉದ್ಘಾಟಿಸಿದರು. ಪ್ರೊ. ಅ.ರಾ. ಮಿತ್ರ **'ಎಂ.ವಿ.ಸೀ ಅವರ ಪ್ರಬಂಧ ಸಾಹಿತ್ಯ'** ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮ ಆಯೋಜಿಸಿದ್ದ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಚ್. ಪಂಪಯ್ಯಶೆಟ್ಟಿ ಆಶಯ ನುಡಿ ನೀಡಿದರು. ಡಾ. ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಶ್ರಿ ಚಂದ್ರಶೇಖರ್ ಸ್ವಾಗತಿಸಿದರು. ಶ್ರೀ ಶ್ರ.ದೇ. ಪಾರ್ಶ್ವನಾಥ ಅವರು ವಂದನಾರ್ಪಣೆ ಮಾಡಿದರು.

ದಿನಾಂಕ: ೦೯-೧೨-೨೦೦೯ರಂದು ನಡೆದ ಎಂ.ವಿ.ಸೀ ಅವರ ೩ನೇ ಉಪನ್ಯಾಸ ಮಾಲೆಯನ್ನು ಕೇಂದ್ರೀಯ ಸದನ ಕನ್ನಡ ಸಂಘ ಕೋರಮಂಗಲ ಆಯೋಜಿಸಿತ್ತು. ಸಂಶೋಧಕ ಡಾ. ಎಚ್.ಎಸ್. ಗೋಪಾಲರಾವ್ ಅವರು **'ಎಂ.ವಿ.ಸೀ. ಅವರ ಶಾಸ್ತ್ರಸಾಹಿತ್ಯ'** ಕುರಿತು ಉಪನ್ಯಾಸ ನೀಡಿದರು. ಡಾ. ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರೀಯ ಸದನ ಕನ್ನಡ ಸಂಘದ ಅಧ್ಯಕ್ಷ ಶ್ರೀ ಮ. ಚಂದ್ರಶೇಖರ್ ಪ್ರಾರಂಭದಲ್ಲಿ ಆಶಯ ನುಡಿ ನೀಡಿದರು. ಶ್ರೀ ರಾ.ನಂ. ಚಂದ್ರಶೇಖರ್ ಸ್ವಾಗತಿಸಿದರು. ಶ್ರೀ ಪಾರ್ಶ್ವನಾಥ ಅವರು ವಂದಿಸಿದರು.

ನಗರದಲ್ಲಿ ಹಾಗೂ ಹೊರಗಡೆ ಎಂ.ವಿ.ಸೀ. ಅವರ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ನಡೆದ ಕಾರ್ಯಕ್ರಮಗಳು :

ದಿನಾಂಕ: ೧೫-೧೧-೨೦೦೯ ಬೆಳಿಗ್ಗೆ ೧೦.೦೦ ಗಂಟೆಯಿಂದ ಯುವಕರಲ್ಲಿ ಕನ್ನಡ ಭಾಷೆ -ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಲು **'ಎಂ.ವಿ.ಸೀ. ಶತಮಾನೋತ್ಸವ ಕನ್ನಡ ಸಂಸ್ಕೃತಿ ಶಿಬಿರ'**ವನ್ನು ಕನ್ನಡ ಗೆಳೆಯರ ಬಳಗ, ಕಾರ್ಮಿಕ ಲೋಕ, ಕನ್ನಡ ಶ್ರೀಸಾಮಾನ್ಯರ ಕೂಟಗಳು ಸಂಯುಕ್ತವಾಗಿ ಆಯೋಜಿಸಿದ್ದವು. ಈ ಕಾರ್ಯಕ್ರಮಗಳನ್ನು ಪ್ರೊ.ಎಲ್.ಎಸ್. ಶೇಷಗಿರಿರಾವ್, ಉದ್ಘಾಟಿಸಿದರು. ಡಾ. ಸೂರ್ಯನಾಥ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಡಾ. ಕೆ.ಪಿ. ಭಟ್ 'ಕನ್ನಡ ಭಾಷೆಯ ಪ್ರಾಚೀನತೆ-ಅನನ್ಯತೆ' ಕುರಿತು, ಡಾ. ಪಿ.ವಿ. ನಾರಾಯಣ 'ಕನ್ನಡ ಸಾಹಿತಿ - ಅನನ್ಯತೆ' ಬಗ್ಗೆ, ಡಾ. ಎ.ಪಿ. ನಿರಂಜನಾರಾಧ್ಯ 'ಶಿಕ್ಷಣದಲ್ಲಿ ಕನ್ನಡ' ವಿಷಯ ಕುರಿತು ಮೌಲಿಕ ಉಪನ್ಯಾಸಗಳನ್ನು ನೀಡಿದರು. ಮಧ್ಯಾಹ್ನ ನಡೆದ ೨ನೇ ಗೋಷ್ಠಿಯಲ್ಲಿ ಜಯಪ್ರಕಾಶ ನಾರಾಯಣ ಅವರು 'ನಾಡು ನುಡಿಯ ಜಾಗೃತಿ, 'ಸಮೂಹ ಮಾಧ್ಯಮ'ದ ಬಗ್ಗೆ ಶ್ರೀ ಎನ್.ಎ.ಎಂ.



೧೫-೧೧-೨೦೦೯ ಭಾನುವಾರ ನಡೆದ ಎಂ.ವಿ.ಸೀ ಶತಮಾನೋತ್ಸವ ಕನ್ನಡ ಸಂಸ್ಕೃತಿ ಶಿಬಿರ
ಸಹಕಾರ : ಕನ್ನಡ ಗೆಳೆಯರ ಬಳಗ, ಕಾರ್ಮಿಕ ಲೋಕ, ಕನ್ನಡ ಶ್ರೀಸಾಮಾನ್ಯರ ಕೂಟ.

ಇಸ್ಮಾಯಿಲ್ ಅವರು 'ಗಣಡದಲ್ಲಿ ಕನ್ನಡ ಆದದ್ದು ಆಗಬೇಕಾದ್ದು' ಬಗ್ಗೆ ಈ ಹೃಷಿಕೇಶ್ ಅವರು 'ಜಲಸಂಪತ್ತು - ಸಮಸ್ಯೆ' ಕುರಿತು, ಹಾಲ್ದೊಡ್ಡೇರಿ ಸುಧೀಂದ್ರ ಅವರು 'ವಿಜ್ಞಾನ - ತಂತ್ರಜ್ಞಾನ'ದ ಬಗ್ಗೆ ವಿಚಾರ ಪೂರ್ಣ ಉಪನ್ಯಾಸ ನೀಡಿದರು. ಸಮಾರೋಪ ಕಾರ್ಯಕ್ರಮದಲ್ಲಿ 'ಕರ್ನಾಟಕ - ಪ್ರಾಚೀನತೆ' ಕುರಿತ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.



ಎಂ.ವಿ.ಸೀ ಶತಮಾನೋತ್ಸವ ಕಾರ್ಯಕ್ರಮವನ್ನು ತಾ॥ ೩೦-೧೧-೨೦೦೯ರಂದು ಮಡಿಕೇರಿಯ ಕನ್ನಡ ಸಾಹಿತ್ಯ ಪರಿಷತ್ತು ಘಟಕ ಏರ್ಪಡಿಸಿತ್ತು.

ದಿನಾಂಕ:೩೦-೧೧-೨೦೦೯ ಕನ್ನಡ ಸಾಹಿತ್ಯ ಪರಿಷತ್ತು ಮಡಿಕೇರಿ, ಫಿ.ಮಾ.ಕಾರ್ಯಪ್ಪ ವಿವಿಧೋದ್ದೇಶ ಸಭಾಂಗಣದಲ್ಲಿ ಎಂ.ವಿ.ಸೀ ಶತಮಾನೋತ್ಸವ ಕಾರ್ಯಕ್ರಮ ಆಯೋಜಿಸಿತ್ತು. ಕಾರ್ಯಕ್ರಮಕ್ಕಾಗಿ ಬೆಂಗಳೂರಿನಿಂದ ಮಡಿಕೇರಿಗೆ ಹೋಗಿದ್ದ ಡಾ. ಪಿ.ವಿ. ನಾರಾಯಣ ಕಾರ್ಯಕ್ರಮ ಉದ್ಘಾಟಿಸಿದರು. ಕೊಡಗು ಜಿಲ್ಲಾ ಕ.ಸಾ. ಪರಿಷತ್ತಿನ ಅಧ್ಯಕ್ಷ ಶ್ರೀ ಟಿ.ಸಿ. ರಮೇಶ್ ಅಧ್ಯಕ್ಷತೆ ವಹಿಸಿದ್ದರು. 'ಎಂ.ವಿ.ಸೀ ಅವರ ಬದುಕು ಬರಹ' ಕುರಿತು ಪ್ರೊ. ಕೆ.ಎಸ್. ಮಧುಸೂದನ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಶ್ರೀ ನರಸಿಂಹಯ್ಯ, ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಎಂ.ಎನ್. ಗಂಗಯ್ಯ ಆಗಮಿಸಿದ್ದರು.

ಡಾ. ನಾ. ಗೀತಾಚಾರ್ಯ ಪ್ರಾಸ್ತಾವಿಕ ಭಾಷಣ ಮಾಡಿ ಪ್ರತಿಷ್ಠಾನ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ನೀಡಿದರು.

ದಿನಾಂಕ: ೧೩-೧೨-೨೦೦೯ ತರಳಬಾಳು ಗ್ರಂಥಾಲಯ, ತರಳ ಬಾಳು ಕೇಂದ್ರ ಬೆಂಗಳೂರು -೩೨. ಅಲ್ಲಿ ಶಿವರಾಮ ವೇದಿಕೆ ಏರ್ಪಡಿಸಿದ್ದ ಈ ಕಾರ್ಯಕ್ರಮದ ಉದ್ಘಾಟನೆಯನ್ನು **ಡಾ.ಪಿ.ವಿ. ನಾರಾಯಣ** ನಡೆಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ **ಎಸ್.ವಿ. ಶ್ರೀನಿವಾಸರಾವ್, ನಂ. ನಂಜಪ್ಪ, ಶ್ರೀಮತಿ ಶಾಂತಕುಮಾರಿ,** ಎಂ.ವಿ.ಸೀ. ಅವರ ಬಹುಮುಖ ಪ್ರತಿಭೆಯ ಮೇಲೆ ಬೆಳಕು ಚೆಲ್ಲಿದರು. ಶಿವರಾಮ ಕಾರಂತ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ **ರಾಧಾ ರಾಮಸ್ವಾಮಿ** ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ **ಡಾ. ನಾ. ಗೀತಾಚಾರ್ಯ** ಪ್ರತಿಷ್ಠಾನ ಹಾಗೂ ಹಸ್ತಪ್ರತಿ ಪ್ರದರ್ಶನದ ಬಗ್ಗೆ ಸಾಕಷ್ಟು ಮಾಹಿತಿ ನೀಡಿದರು. ವೇದಿಕೆಯ ಕಾರ್ಯದರ್ಶಿ **ಶ್ರೀ ಪ. ಚಂದ್ರಶೇಖರ ಚಡಗ** ಸ್ವಾಗತಿಸಿದ್ದಲ್ಲದೆ ಕಾರ್ಯಕ್ರಮ ನಿರ್ವಹಣೆ ಸಹ-ಮಾಡಿದರು.

ದಿನಾಂಕ: ೨೦-೧೨-೨೦೦೯ ವಿದ್ಯೋದಯ ಕಾಲೇಜಿನ ಸಭಾಂಗಣ ತುಮಕೂರು ಬೆಳಗ್ಗೆ ೧೦.೩೦. 'ತುಮಕೂರು ವಾರ್ತೆ' ಮತ್ತು 'ನಗೆಮುಗುಳು' ಆಯೋಜಿಸಿದ್ದ ಎಂ.ವಿ.ಸೀ. ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಸಹ ನಡೆಯಿತು. ತುಮಕೂರು ಜಿಲ್ಲಾಧಿಕಾರಿ **ಡಾ. ಸಿ. ಸೋಮಶೇಖರ್** ಉದ್ಘಾಟಿಸಿದರು. **ಡಾ. ಪಿ.ವಿ. ನಾರಾಯಣ** ಅಧ್ಯಕ್ಷತೆ ವಹಿಸಿದ್ದರು. ಖ್ಯಾತ ಲೇಖಕಿ ಶ್ರೀಮತಿ **ಕಮಲಾನರಸಿಂಹ,** ಪ್ರಾಸ್ತಾವಿಕ ಭಾಷಣ ಮಾಡಿದರು. ತುಮಕೂರು ವಾರ್ತೆಯ ಸಂಪಾದಕರಾದ **ಶ್ರೀ ರಾಮಣ್ಣ** ಸ್ವಾಗತಿಸಿದರು. ಎಂ.ವಿ.ಸೀ.ಬಗ್ಗೆ **ಶ್ರೀ ಶ್ರೀನಿವಾಸರಾವ್,** ಹಸ್ತಪ್ರತಿ ಸಂಗ್ರಹಣ ಪ್ರದರ್ಶನದ ಬಗ್ಗೆ **ಡಾ. ನಾ. ಗೀತಾಚಾರ್ಯ** ಭಾಷಣ ಮಾಡಿದರು.

ದಿನಾಂಕ:೨೦-೧೨-೨೦೦೯ ಅಭಿರುಚಿ ಸಾಹಿತ್ಯಕ-ಸಾಂಸ್ಕೃತಿಕ ವೇದಿಕೆ ಚಿತ್ರದುರ್ಗ ಸಂಜೆ ೫-೧೫. ಐ.ಎಂ.ಎ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಶೋಧಕ ಪ್ರೊ. ರಾಜಶೇಖರಪ್ಪ ವಹಿಸಿದ್ದರು. ಡಾ. ಪಿ.ವಿ. ನಾರಾಯಣ ಎಂ.ವಿ.ಸೀ ಅವರ ಕೃತಿಗಳ ಬಗ್ಗೆ ಬೆಳಕು ಚೆಲ್ಲಿದರು ಎಸ್.ವಿ. ಶ್ರೀನಿವಾಸರಾವ್ ಅವರು ಎಂ.ವಿ.ಸೀ. ಜೀವನ ಸಾಧನೆಯ ಬಗ್ಗೆ ಮಾತನಾಡಿದರು.

ಡಾ. ನಾ. ಗೀತಾಚಾರ್ಯ ಹಸ್ತಪ್ರತಿ ಸಂಗ್ರಪ-ಪ್ರದರ್ಶನದ ಬಗ್ಗೆ ಮಾಹಿತಿ ನೀಡಿದರು. ಪ್ರೊ. ವೀರೇಂದ್ರ ಕುಮಾರ್ ಸ್ವಾಗತಿಸಿದರು.

ದಿನಾಂಕ: ೨೧-೧೨-೨೦೦೯ ಬೆಳಗ್ಗೆ ೧೧.೦೦ ಗಂಟೆಗೆ ರೋಟರಿ ಕ್ಲಬ್ ಚಳ್ಳಕೆರೆ, ಕನ್ನಡ ಸಾಹಿತ್ಯ ಪರಿಷತ್ತು: ಕರ್ನಾಟಕ ರಕ್ಷಣಾವೇದಿಕೆ ಸಂಯುಕ್ತವಾಗಿ ಆಯೋಜಿಸಿದ್ದ ಈ ಕಾರ್ಯಕ್ರಮದ ಉದ್ಘಾಟನೆಯನ್ನು - ಡಾ. ಬೆಳಗೆರೆ ಕೃಷ್ಣಶಾಸ್ತ್ರೀಗಳ ಅನುಪಸ್ಥಿತಿಯಲ್ಲಿ ಡಾ. ಪಿ.ವಿ. **ನಾರಾಯಣ** ನೆರವೇರಿಸಿದರು. ಸ್ನಾತಕೋತ್ತರ ಅಧ್ಯಯನ ಕೇಂದ್ರದ **ಪ್ರೊ. ಶಿವಲಿಂಗಪ್ಪ** ಪ್ರಾಸ್ತಾವಿಕ ಭಾಷಣ ಮಾಡಿದರು. ರೋಟೇರಿಯನ್ **ಡಾ. ಕೆ.ಎಂ. ಜಯಕುಮಾರ್** ಸ್ವಾಗತಿಸಿದರು. ಎಂ.ವಿ.ಸೀ ಬಗ್ಗೆ **ಎಸ್.ವಿ. ಶ್ರೀನಿವಾಸರಾವ್, ಹೆಚ್. ಬಸವರಾಜ್** (ಅಧ್ಯಕ್ಷರು ಕ.ರ.ವೇ. ಚಳ್ಳಕೆರೆ) ಹಿರಿಯ ದೈಹಿಕ ಶಿಕ್ಷಕ ಶ್ರೀ **ಉಮಾಪತಿ,** ಭಾಷಣ ಮಾಡಿದರು, **ಡಾ. ನಾ. ಗೀತಾಚಾರ್ಯ** ಹಸ್ತಪ್ರತಿಗಳ ಬಗ್ಗೆ ಮಾಹಿತಿ ನೀಡಿದರು ಕ.ಸಾ.ಪರಿಷತ್ತಿನ ಅಧ್ಯಕ್ಷ ಶ್ರೀ **ತಿಪ್ಪೇಸ್ವಾಮಿ** ವಂದನಾರ್ಪಣೆ ಮಾಡಿದರು. ರೋಟೇರಿಯನ್ **ಪರಮೇಶ್ವರಪ್ಪ** ಕುದುರಿ ಕಾರ್ಯಕ್ರಮ ನಿರೂಪಿಸಿದರು.

ದಿನಾಂಕ: ೨೨-೧೨-೨೦೦೯ (ಸಂಜೆ ೪.೦೦) ನಾರಾಯಣಪುರ ಬೆಳಗೆರೆಯ **'ಸೀತಾರಾಮಶಾಸ್ತ್ರೀ, ಪ್ರೌಢಶಾಲೆ'**ಯಲ್ಲಿ ಕಾರ್ಯಕ್ರಮ ನಡೆಯಿತು. ಬೆಳಗೆರೆ ಕೃಷ್ಣಶಾಸ್ತ್ರೀಗಳು ಅಧ್ಯಕ್ಷತೆ ವಹಿಸಿದ್ದರು. **ಡಾ. ಪಿ.ವಿ. ನಾರಾಯಣ** ಉದ್ಘಾಟಿಸಿದರು. ಶ್ರೀ **ಶ್ರೀನಿವಾಸರಾವ್** ಹಾಗೂ **ಡಾ. ನಾ. ಗೀತಾಚಾರ್ಯ** ಮುಖ್ಯ ಅತಿಥಿಗಳಾಗಿದ್ದು ಎಂ.ವಿ.ಸೀ ಪ್ರತಿಷ್ಠಾನ ಹಾಗೂ ಹಸ್ತಪ್ರತಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ದಿನಾಂಕ: ೨೨-೧೨-೨೦೦೯ ವಾಣಿವಿಲಾಸ ಮಾರಿಕಣಿವೆ-ಕಂಕರೆಯ ಶಾಲೆಯಲ್ಲಿ ಅನಿರೀಕ್ಷಿತವಾಗಿ ಕಾರ್ಯಕ್ರಮ ಆಯೋಜಿಸಲ್ಪಟ್ಟಿತು. ಪ್ರೊ. ಬಿ. ಚಿಕ್ಕಣ್ಣ ಆಯೋಜಿಸಿದ್ದರು. ಅದೇ ದಿನ ಸಂಜೆ ೬.೦೦ ಗಂಟೆಗೆ ಹುಳಿಯಾರು ಶಾಲಾ ಆವರಣದಲ್ಲಿ ರೋಟರಿ, ಕನ್ನಡ ಸಾಹಿತ್ಯ ಪರಿಷತ್ತು, ಹಿರಿಯೂರು, ಆಯೋಜಿಸಿದ್ದ ಕಾರ್ಯಕ್ರಮವನ್ನು **ಡಾ. ಪಿ.ವಿ. ನಾರಾಯಣ** ಉದ್ಘಾಟಿಸಿದರು. ಉಪನ್ಯಾಸಕ **ಎಂ. ಹಾಲಪ್ಪ,** ಸ್ವಾಗತಿಸಿದರು. **ಡಾ. ನಟರಾಜ** ಅಧ್ಯಕ್ಷತೆ ವಹಿಸಿದ್ದರು. ಶ್ರೀ **ಎಸ್.ವಿ. ಶ್ರೀನಿವಾಸರಾವ್** ಅವರು ಪ್ರತಿಷ್ಠಾನ ಹಾಗೂ ಎಂ.ವಿ.ಸೀ

ಅವರ ಸಮಗ್ರ ಸಾಹಿತ್ಯ ಕೊಡುಗೆಗಳ ಬಗ್ಗೆ ಮಾತನಾಡಿದರು. **ಡಾ. ನಾ. ಗೀತಾಚಾರ್ಯ** 'ಹಸ್ತಪ್ರತಿ' ಸಂಗ್ರಹ ಸಂರಕ್ಷಣೆಯ ಅವಶ್ಯಕತೆ ಕುರಿತು ಮಾಹಿತಿ ನೀಡಿದರು. ರೋಟರಿ ಅಧ್ಯಕ್ಷರಾದ **ಶ್ರೀ ಕೆ.ಎಸ್. ಮಹಾಬಲೇಶ್ವರಶೆಟ್ಟಿ, ಶ್ರೀ ಎನ್. ಮಂಜುನಾಥ್, ಡಾ.ಎಂ.ಎನ್. ಶ್ರೀಪತಿ, ಪ್ರೊ. ಬಿ. ಚಿಕ್ಕಣ್ಣ,** ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕ.ಸಾ.ಪ. ಅಧ್ಯಕ್ಷ ಶ್ರೀ ಹು.ಕ. ರಾಮಯ್ಯ ಕಾರ್ಯಕ್ರಮ ನಿರೂಪಿಸಿದರು.



೨೬-೧೨-೨೦೦೯ ಹಳಗನ್ನಡ ಕಾವ್ಯ ಶಿಬಿರ
'ಚಂಪೂ ಕವಿ-ಕೃತಿ ಮನನ'

ಡಿಸೆಂಬರ್ ೨೬ ರಿಂದ ೨೮, ೨೦೦೯ : ಎಂ.ವಿ.ಸೀ ಶತಮಾನೋತ್ಸವ ಸಮಿತಿ ಹಮ್ಮಿಕೊಂಡಿದ್ದ ೩ ದಿನಗಳ ವಿಶೇಷ ಹಳಗನ್ನಡ ಕಾವ್ಯ ಶಿಬಿರ **'ಚಂಪೂ ಕವಿ-ಕೃತಿ ಮನನ'** ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಡನೆ ಬಿ.ಎಂ.ಶ್ರೀ ಸಭಾಭವನದಲ್ಲಿ ನಡೆಯಿತು. ಬೆಳಿಗ್ಗೆ ೧೦.೦೦ ಗಂಟೆಗೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮವನ್ನು ನಾಡೋಜ ಜಿ. ವೆಂಕಟಸುಬ್ಬಯ್ಯ ಉದ್ಘಾಟಿಸಿದರು. ಡಾ. ಪಿ.ವಿ. ನಾರಾಯಣ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಚಂಪೂ ಕಾವ್ಯಗಳ ಉಗಮ, ವಿಕಾಸ, ಉಪಯಕ್ತತೆ ಬಗ್ಗೆ ಆಧಾರಪೂರ್ಣ ಮಾಹಿತಿ ನೀಡಿದರು.


೧೨.೦೦ ಗಂಟೆಗೆ ಪ್ರಾರಂಭಗೊಂಡ ಮೊದಲನೆಯ ಗೋಷ್ಠಿ **'ಚಂಪೂ ಪ್ರಕಾರದ ಸ್ವರೂಪ ಮತ್ತು ಹಿನ್ನೆಲೆ'**ಯ ಬಗ್ಗೆ **ಡಾ. ರಮೇಶ್ ಚಂದ್ರದತ್ತ,** ೨ನೇ ಗೋಷ್ಠಿ (೨-೧೫) **'ಅರಿವುದು ಕಾವ್ಯಧರ್ಮಮಂ ಧರ್ಮಮುಮಂ'** ವಿಷಯದ ಬಗ್ಗೆ **ಡಾ. ಜಿ.ಬಿ. ಹರೀಶ್,** ೩ನೇ ಗೋಷ್ಠಿ **'ಬೆಳಗುವೆನಿಲ್ಲಿ ಲೌಕಿಕಮನ್'** ವಿಷಯದ ಬಗ್ಗೆ **ಡಾ. ಜಿ.ಎಸ್. ಸಿದ್ಧಲಿಂಗಯ್ಯ** ಅವರು ಉಪನ್ಯಾಸಗಳನ್ನು ನೀಡಿದರು. ಸಂಜೆ ೫.೩೦ ರಿಂದ ಗಮಕ ವಿದ್ವಾನ್ **ಶ್ರೀ ಎಂ.ಆರ್. ಸತ್ಯನಾರಾಯಣ** ಅವರಿಂದ 'ಪಂಪರಾಮಾಯಣ' ಗಮಕವಾಚನ ನಡೆಯಿತು.

ದಿನಾಂಕ: ೨೭-೧೨-೨೦೦೯ರಂದು ನಡೆದ ಪ್ರಥಮ ಗೋಷ್ಠಿ (ಬೆಳಿಗ್ಗೆ ೧೦.೦೦). **'ರನ್ನನ ಕೃತಿಗಳಲ್ಲಿನ ಐತಿಹಾಸಿಕ ಸಂಗತಿಗಳು'** ಈ ಬಗ್ಗೆ **ಪ್ರೊ. ಅ.ರಾ. ಮಿತ್ರ** ರವರು, ಎರಡನೆ ಗೋಷ್ಠಿಯಲ್ಲಿ **'ನಾಗಚಂದ್ರನ ದುರಂತ ರಾವಣ'** ವಿಷಯದ ಬಗ್ಗೆ **ಡಾ. ಚಂದ್ರಮೋಹನ್,** ೩ನೇ ಗೋಷ್ಠಿ (೧೩-೪೫)ಯಲ್ಲಿ **'ನಯಸೇನನ ಕೃತಿಯಿಂದ ಚಂಪೂ ಪ್ರಕಾರಕ್ಕೆ ದೊರೆತ ಹೊಸ ರೂಪ'** ಈ ವಿಷಯದ ಬಗ್ಗೆ **ಡಾ. ಲಲಿತಾಂಬ,** ನಾಲ್ಕನೆ ಗೋಷ್ಠಿ (೩-೧೫) **'ಜನ್ನನ ಕಾವ್ಯಗಳಲ್ಲಿ – ಗಂಡು ಹೆಣ್ಣು ಸಂಬಂಧಗಳು'** ವಿಷಯದ ಬಗ್ಗೆ ಡಾ. ಶಶಿಕಲಾ ಇವರುಗಳು ಬಹು ಉಪಯುಕ್ತ ಉಪನ್ಯಾಸಗಳನ್ನು ನೀಡಿದರು.

ಸಂಜೆ ೫.೦೦ ಗಂಟೆಗೆ 'ಕವಿರಾಜಮಾರ್ಗ' ಸಾಕ್ಷ್ಯಚಿತ್ರ ಪ್ರದರ್ಶನ ನಡೆಯಿತು.

ದಿನಾಂಕ: ೨೮-೧೨-೨೦೦೯(೧೧.೦೦) 'ಆಂಡಯ್ಯನ ಕಬ್ಬಿಗರ ಕಾವದ ಭಾಷಾವೈಶಿಷ್ಟ್ಯ' ಈ ಬಗ್ಗೆ **ಡಾ. ಕೆ.ಆರ್. ಗಣೇಶ್,** ೨ನೇ ಗೋಷ್ಠಿಯಲ್ಲಿ (೧೧.೪೫) **'ರುದ್ರಭಟ್ಟನ ಜಗನ್ನಾಥ ವಿಜಯಂ'** ಬಗ್ಗೆ **ಡಾ. ರಾ. ಲಕ್ಷ್ಮೀನಾರಾಯಣ;** ೩ನೇ ಗೋಷ್ಠಿ (೧೨.೦೦)ಯಲ್ಲಿ **'ಹರಿಹರನ ಗಿರಿಜಾ ಕಲ್ಯಾಣದ ಸ್ವರೂಪ'** ಕುರಿತು **ಡಾ. ಶ್ರೀರಾಮಭಟ್ಟ** ಉಪನ್ಯಾಸಗಳನ್ನು ನೀಡಿದರು.

ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು **ನಾಡೋಜ ಜಿ. ನಾರಾಯಣ** ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ **ಪ್ರೊ. ಎಂ.ಎಚ್. ಕೃಷ್ಣಯ್ಯ** ಸಮಾರೋಪ ಭಾಷಣಮಾಡಿದರು. **ಶ್ರೀ ಸವಿರಾಜು ಮತ್ತು ಸಂಗಡಿಗರು** ಎಂ.ವಿ.ಸೀ ಅವರ **'ಸ್ವಯಂವರ'** ನಾಟಕವನ್ನು ಪ್ರಸ್ತುತಪಡಿಸಿದರು.



೨೮-೧೨-೨೦೦೯ – ಸಾಂಸ್ಕೃತಿಕ ಕಾರ್ಯಕ್ರಮ
ಸವಿರಾಜು ಮತ್ತು ಸಂಗಡಿಗರು ಎಂ.ವಿ.ಸೀ. ಅವರ 'ಸ್ವಯಂವರ'
ನಾಟಕವನ್ನು ಪ್ರಸ್ತುತಪಡಿಸಿದರು.

ಈ ಮೂರೂ ದಿನಗಳೂ ಶಿಬಿರದ ನಿರ್ದೇಶಕರಾದ ಡಾ. ವಿಜಯಾ ಸುಬ್ಬರಾಜ್ ಬಹುಸಮರ್ಥವಾಗಿ ನಿರೂಪಣೆ ನಡೆಸಿ ಕಾರ್ಯಕ್ರಮ ನಿರ್ವಹಿಸಿದರು. (ಮೇಲ್ಕಂಡ ಕಾರ್ಯಕ್ರಮಗಳಿಗೆ ಸಹಕಾರ, ಜಿ.ಪಿ. ರಾಜರತ್ನಂ ದತ್ತಿ, ವಿ.ಸೀ.ದತ್ತಿ, ಡಿ.ಎಲ್.ಎನ್. ದತ್ತಿ)

'ಚಂಪೂ ಕವಿ-ಕಾವ್ಯ' ಕಾರ್ಯಕ್ರಮವನ್ನು ಪ್ರಾಯೋಜಿಸಿದ
ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಸಿದ್ಧಲಿಂಗಯ್ಯ
ಹಾಗೂ ಸಮಿತಿಯ ಎಲ್ಲಾ ಸದಸ್ಯರಿಗೂ
ಪ್ರತಿಷ್ಠಾನ ಆಭಾರಿಯಾಗಿದೆ.

ಸಂಘ-ಸಂಸ್ಥೆಗಳು ನಡೆಸಿದ
ಎಂ.ವಿ.ಸೀ ಶತಮಾನೋತ್ಸವ ಕಾರ್ಯಕ್ರಮಗಳು :

ದಿನಾಂಕ: ೧೫-೧೨-೨೦೦೯ರಂದು ಮಲ್ಲೇಶ್ವರಂನ ಗಾಂಧಿ ಸಾಹಿತ್ಯ ಸಂಘ 'ಎಂ.ವಿ.ಸೀ. ಅವರ ಸಾಹಿತ್ಯ ಸೇವೆ' ಕುರಿತು ಉಪನ್ಯಾಸ ಏರ್ಪಡಿಸಿತ್ತು. ಎಂ.ವಿ.ಸೀ. ಕುರಿತು ಪ್ರೊ.ಕೆ.ಎಸ್. ಮಧುಸೂದನ ಉಪನ್ಯಾಸ ನೀಡಿದರು.

ದಿನಾಂಕ: ೨೯-೧೧-೨೦೦೯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಇವರು ನಡೆಸಿದ ಕಾರ್ಯಕ್ರಮದ ಉದ್ಘಾಟನೆ ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀಗಳಿಂದ ನಡೆಯಿತು. ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಮಡ್ಡಿಕೆರೆ ಗೋಪಾಲ್ ನುಡಿದರು. ಡಾ.ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಕೆ.ಎಸ್. ಮಧುಸೂದನ ಮತ್ತು ಡಾ. ನಾ. ಗೀತಾಚಾರ್ಯ ಅವರು ಎಂ.ವಿ.ಸೀ ಮತ್ತು ಹಸ್ತಪ್ರತಿಗಳ ಬಗ್ಗೆ ಉಪನ್ಯಾಸ ನೀಡಿದರು.

ದಿನಾಂಕ: ೨೯-೧೧-೨೦೦೯ ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಸಿದ್ಧನಹಳ್ಳಿ ಗ್ರಾಮ(ಬೇವೂರು ಮಂಡ್ಯ ಜಿಲ್ಲೆ) ಕನ್ನಡ ಕವಿ-ಕಾವ್ಯ ಸಮ್ಮೇಳನ ನಡೆಸಿತು. ಈ ಕಾರ್ಯಗಳ ಅಂಗವಾಗಿ ಎಂ.ವಿ.ಸೀ ಅವರ ಕವಿಗೋಷ್ಠಿ- ಕಾವ್ಯಕುಂಚ ಕಾರ್ಯಕ್ರಮ ನಡೆಸಿತು. **ಡಾ. ವಿಜಯಾ ಸುಬ್ಬರಾಜ್** ಅಧ್ಯಕ್ಷತೆ ವಹಿಸಿ ಉಪನ್ಯಾಸ ಸಹ ನೀಡಿದರು.

ದಿನಾಂಕ: ೩೦-೧೦-೨೦೦೯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಮನಗರ ಜಿಲ್ಲೆ ಮತ್ತು ಶ್ರೀ ಸಿದ್ಧರಾಮೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು ಸಂಯುಕ್ತ ಆಶ್ರಯದಲ್ಲಿ 'ಚಿಗುರು' ಕಾರ್ಯಕ್ರಮ ಆಯೋಜಿಸಿದ್ದವು. ಈ ಕಾರ್ಯಗಳ ಅಂಗವಾಗಿ ಎಂ.ವಿ.ಸೀ. ಅವರ ಬಗ್ಗೆ ಒಂದು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು, **ಡಾ. ನಾ. ಗೀತಾಚಾರ್ಯ** ಈ ಉಪನ್ಯಾಸ ನೀಡಿದರು.

ಬಿ.ಎಂ.ಶ್ರೀ ಪ್ರತಿಷ್ಠಾನ ನಡೆಸಿದ ಕಾರ್ಯಕ್ರಮಗಳ ಬಗ್ಗೆ ಬಂದಿರುವ ಕೆಲ ಪತ್ರಿಕಾ ವರದಿಗಳು :
ಪತ್ರಿಕೆ : ಪ್ರಜಾವಾಣಿ ದಿನಾಂಕ: ೨೫-೧೨-೨೦೦೯

(೧) ವೀಕ್ಷಣೆ....

ಹುಳಿಯಾರು - ಕೆಂಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರಾಚೀನ ಹಸ್ತಪ್ರತಿ ಪ್ರದರ್ಶನವನ್ನು ಪಟ್ಟಣದ ವಿವಿಧ ಶಾಲೆಯ ವಿದ್ಯಾರ್ಥಿಗಳು ವೀಕ್ಷಿಸಿದರು.

(೨) ಹಸ್ತಪ್ರತಿಗಳು ನಾಡಿನ ಅಮೂಲ್ಯ ಆಸ್ತಿ :

ಹುಳಿಯಾರು : ನಾಡಿನ ಅಮೂಲ್ಯ ಆಸ್ತಿಯಂತಿರುವ ಚಾರಿತ್ರಿಕತೆಯನ್ನು ಸಾರುವ ಶಾಸನ ಹಾಗೂ ಹಸ್ತಪ್ರತಿಗಳನ್ನು ಸಂರಕ್ಷಿಸುವ ಹೊಣೆ ಯುವ ಜನತೆಯ ಮೇಲಿದೆ ಎಂದು ಪ್ರಸಿದ್ಧ ವಿದ್ವಾಂಸರು ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಪಿ.ವಿ. ನಾರಾಯಣ ತಿಳಿಸಿದರು.

ಹುಳಿಯಾರು-ಕೆಂಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಘಟಕದ ಆಶ್ರಯದಲ್ಲಿ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಎಂ.ವಿ.ಸೀತಾರಾಮಯ್ಯನವರ ಜನ್ಮಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಎಂ.ವಿ.ಸೀತಾರಾಮಯ್ಯನವರ ಜನ್ಮಶತಮಾನೋತ್ಸವದ ಈ ವರ್ಷವನ್ನು ಹಸ್ತಪ್ರತಿ ಅಧ್ಯಯನ ವರ್ಷ (೨೦೦೯-೧೦) ಎಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಘೋಷಿಸಿದೆ ಎಂದ ಅವರು ಆಸಕ್ತರು ಕರೆದಲ್ಲಿಗೆ ಪ್ರಾಚೀನ ಹಸ್ತಪ್ರತಿಗಳನ್ನು ಕೊಂಡೊಯ್ದು ಪ್ರದರ್ಶನ ಮಾಡುವುದರ ಜೊತೆಗೆ ಹಿರಿಯ ವಿದ್ವಾಂಸರು ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಸಂಗ್ರಹ ಕುರಿತು ಉಪನ್ಯಾಸವನ್ನು ನೀಡಲಾಗುತ್ತಿದೆ ಎಂದರು.

ಕನ್ನಡ ಭಾಷೆಗೆ ೨ ಸಾವಿರ ವರ್ಷಗಳ ಇತಿಹಾಸವಿದೆ ೬ ಕೋಟಿಗೂ ಅಧಿಕ ಜನರ ಆಡುಭಾಷೆಯಾಗಿದೆ. ಇದಕ್ಕಾಗಿಯೇ ಕನ್ನಡಕ್ಕೆ ಇಂದು ಶಾಸ್ತ್ರೀಯ ಸ್ಥಾನ ದೊರಕಿದೆ. ಕ್ರಿ.ಶ. ೫ನೇ ಶತಮಾನದಲ್ಲಿಯೇ ಕನ್ನಡ ಭಾಷೆಗೆ ಅದರದ್ದೇ ಆದ ಲಿಪಿ ಇದ್ದುದನ್ನು ಹಲ್ಮಿಡಿ ಶಾಸನದಿಂದ ತಿಳಿದು ಬರುತ್ತದೆ. ಆ ವೇಳೆಯಲ್ಲಿ ತಮಿಳು ಭಾಷೆಗೆ ಇನ್ನೂ ಸ್ವಂತ ಲಿಪಿಯೆಂಬುದಿರಲಿಲ್ಲ ಎನ್ನುವುದನ್ನು ನೆನಪಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ನಾ. ಗೀತಾಚಾರ್ಯರು ಮಾತನಾಡಿ, ಎಂ.ವಿ.ಸೀ.ಯವರು ೩೦ ಪ್ರತಿಗಳಿಂದ ಹಸ್ತಪ್ರತಿ ಅಧ್ಯಯನವನ್ನು ಪ್ರಾರಂಭಿಸಿದ್ದರು. ಇಂದು ೩ ಸಾವಿರ ಹಸ್ತಪ್ರತಿಗಳ ಸಂಗ್ರಹವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನ ಹೊಂದಿದೆ. ಈಗಲೂ ಎಲ್ಲಿಯಾದರೂ ಓಲೆಗರಿಗಳು ಸೇರಿದಂತೆ ಯಾವುದೆ ಹಸ್ತಪ್ರತಿಯ ಕುರುಹುಗಳು ನಿಮ್ಮ ಗಮನಕ್ಕೆ ಬಂದರೆ ದಯವಿಟ್ಟು ಆಸಕ್ತರ ಮೂಲಕ ತಮ್ಮ ಕಚೇರಿಗೆ ಕಳುಹಿಸಿದರೆ ಅವುಗಳನ್ನು ನಾವು ತಮ್ಮ ಹೆಸರಿನಲ್ಲಿಯೇ ಸಂರಕ್ಷಿಸುತ್ತೇವೆ ಎಂದು ತಿಳಿಸಿದರು.

ತಾಳೆಗರಿಗಳ ಸ್ವರೂಪವನ್ನ ವಿದ್ಯಾರ್ಥಿಗಳು ಅರಿಯಬೇಕು ಎಂದರಲ್ಲದೆ, ಓಲೆಗರಿಗಳಲ್ಲಿ ಅಕ್ಷರ ಕೊರೆಯುತ್ತಿದ್ದ ಸಾಧನ, ಭೂತ ಕನ್ನಡಿ, ಕಡತಗಳಲ್ಲಿ ಬರೆಯುತ್ತಿದ್ದ ರೀತಿ ಭೂರ್ಜ್ವಪತ್ರ, ಹಸ್ತಪ್ರತಿಗಳನ್ನು ಪ್ರದರ್ಶನದಲ್ಲಿ ವಿವರಿಸಿದರು.

ಕಾಲೇಜಿನ ಪ್ರಾಚಾರ್ಯ ನಟರಾಜು ಅಧ್ಯಕ್ಷತೆ ವಹಿಸಿದ್ದರು. ಹೋಬಳಿ ಕ.ಸಾ.ಪ. ಘಟಕದ ತ.ಶಿ. ಬಸವಮೂರ್ತಿ, ಬಿ. ಚಿಕ್ಕಣ್ಣ ಮತ್ತಿತರರು ಹಾಜರಿದ್ದರು. ಉಪನ್ಯಾಸಕ ಎಂ. ಹಾಲಪ್ಪ ಸ್ವಾಗತಿಸಿದರು. ಕ.ಸಾ.ಪ. ಘಟಕದ ಅಧ್ಯಕ್ಷ ಹು.ಕ. ರಾಮಯ್ಯ ನಿರೂಪಿಸಿದರು. ಚಂದ್ರಯ್ಯ ವಂದಿಸಿದರು. ಪಟ್ಟಣದ ವಿವಿಧ ಶಾಲೆಯ ವಿದ್ಯಾರ್ಥಿಗಳು ಆಗಮಿಸಿ ಹಸ್ತಪ್ರತಿ ಪ್ರದರ್ಶನವನ್ನು ವೀಕ್ಷಿಸಿದರು.

ದಾನಿಗಳು

೧.ದತ್ತಿನಿಧಿ :

೧) ಸಾರಂಗಿ ವೆಂಕಟರಾಮಯ್ಯ ಪುಟ್ಟಚ್ಚಮ್ಮ ದತ್ತಿಗೆ
ಹೆಚ್ಚಿನಹಣ ನೀಡಿರುವವರು
ಎಸ್.ವಿ. ಶ್ರೀನಿವಾಸರಾವ್ ೫,೦೦೦-೦೦

೨) ಕೆ.ಎಸ್. ಗಾಯತ್ರಿ + ಶ್ರೀ ಕೆ.ಎಸ್. ಆನಂದ
ದಿ॥ ಕೊರಟಿ ಶ್ರೀನಿವಾಸರಾವ್ ದತ್ತಿ ಸ್ಥಾಪನೆಗೆ ೨೫,೦೦೦-೦೦

೩) ಮುಂ.ಮಂ ಅಣ್ಣಾದೊರೆ ಕುಟುಂಬ
ಮುಂ.ಅ. ರಾಮಾನುಜ ಅಯ್ಯಂಗಾರ್
ದತ್ತಿ ಪುಸ್ತಕ ಪ್ರಕಟಣೆಗೆ ೧,೦೦,೦೦೦-೦೦

ಗ್ರಂಥದಾನ:

ಶ್ರೀ ಎಸ್.ವಿ. ಶ್ರೀನಿವಾಸರಾವ್, ಬೆಂ. ೩೫
ಶ್ರೀ ಧ್ರುವನಾರಾಯಣ, ಬೆಂ. ೫೪
ಶ್ರೀಮತಿ ಶ್ರೀ ಕೆ.ಎಸ್. ಗಾಯತ್ರಿ ಕೆ.ಎಸ್. ಆನಂದ್ ೪೪

ಅಭಿನಂದನೆಗಳು

- **ನೃಪತುಂಗ ಸಾಹಿತ್ಯ ಪ್ರಶಸ್ತಿ** : ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ನೀಡುತ್ತಿರುವ ೨೦೦೯ನೇ ಸಾಲಿನ ಈ ಪ್ರಶಸ್ತಿಯನ್ನು ಡಾ. ಜಿ.ಎಸ್. ಶಿವರುದ್ರಪ್ಪ ಅವರಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ ನೀಡಿ ಗೌರವಿಸಲಾಯಿತು.

- **'ಮೂರ್ತಿದೇವಿ ಪ್ರಶಸ್ತಿ'(೨೦೦೭) : ಡಾ. ವೀರಪ್ಪ ಮೊಯಿಲಿ** ಅವರ ಪ್ರತಿಷ್ಠಿತ ಕೃತಿ 'ಶ್ರೀ ರಾಮಾಯಣ ಮಹಾನ್ವೇಷಣಂ'ಗೆ ಈ ಪ್ರತಿಷ್ಠಿತ ಪ್ರಶಸ್ತಿ ಸಂದಿದೆ.

- **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'** : ಖ್ಯಾತ ಸಾಹಿತಿ **ವೈದೇಹಿಯವರ 'ಕ್ರೌಂಚಪಕ್ಷಿಗಳು'** ಕಥಾಸಂಕಲನಕ್ಕೆ ೨೦೦೯ನೇ ಸಾಲಿನ ಪ್ರಶಸ್ತಿ ಲಭಿಸಿದೆ.

- **ಚದುರಂಗ ಪ್ರಶಸ್ತಿ** : ಡಾ. ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಗೆ ಈ ಪ್ರಶಸ್ತಿ ಸಂದಿದೆ.

- **ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ -೨೦೦೮**: ಕನ್ನಡದ ಖ್ಯಾತ ನಟಿ **'ಉಮಾಶ್ರೀ'** ಅವರಿಗೆ **'ಗುಲಾಬಿ ಟಾಕೀಸ್'** ಚಿತ್ರದ ನಟನೆಗಾಗಿ **'ಶ್ರೇಷ್ಠ ನಟಿ ಪ್ರಶಸ್ತಿ'**, ಕನ್ನಡದ ಖ್ಯಾತನಟ **ಶ್ರೀ ಪ್ರಕಾಶರೈ** ಅವರಿಗೆ ತೆಲುಗಿನ **'ಕಾಂಜೀವರಂ'** ಚಿತ್ರದಲ್ಲಿನ ನಟನೆಗಾಗಿ **'ಶ್ರೇಷ್ಠನಟ ಪ್ರಶಸ್ತಿ'** ಸಂದಿವೆ.

- **'ಬಸವಶ್ರೀ ಪ್ರಶಸ್ತಿ'(೨೦೦೯)** : ಮುರುಘಾ ಮಠದ ವತಿಯಿಂದ ನೀಡಲಾಗುವ ಪ್ರತಿಷ್ಠಿತ **'ಬಸವಶ್ರೀ ಪ್ರಶಸ್ತಿ**, ಓಟದ ರಾಣಿ ಪಿ.ಟಿ. **ಉಷಾಗೆ** ನೀಡಲಾಗಿದೆ. (೧೩-೦೯-೨೦೦೯)

- **'ನಿರಂಜನ ಪ್ರಶಸ್ತಿ'** :(೨೦೦೯) ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಡಾ. **ಲಕ್ಷ್ಮೀನಾರಾಯನ ಭಟ್ಟ** ಅವರಿಗೆ ಪುತ್ತೂರಿನ ಶಿವರಾಮ ಕಾರಂತ ಅಧ್ಯಯನ ಕೇಂದ್ರವು ನೀಡುವುದಾಗಿ ಪ್ರಕಟಿಸಿದೆ. (೧೩-೦೯-೨೦೦೯).

- **ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು**: ಕನ್ನಡದ ಖ್ಯಾತ ಲೇಖಕಿ **ಡಾ. ಗೀತಾ ನಾಗಭೂಷಣ** ಅವರನ್ನು ಗದಗ್‌ನಲ್ಲಿ ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ೭೬ನೇ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನಾಗಿ ಆಯ್ಕೆಮಾಡಿರುವುದಾಗಿ ಕ.ಸಾ. ಪರಿಷತ್ತು ಘೋಷಿಸಿದೆ.

- **ಕರ್ನಾಟಕ ರತ್ನ** : ಖ್ಯಾತ ಹಿರಿಯ ಸಾಹಿತಿ **ನಾಡೋಜ ದೇ.ಜವರೇಗೌಡ** ಅವರಿಗೆ ೨೦೦೮ನೇ ಸಾಲಿನ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು, ೨೦೦೯ರ **'ಕರ್ನಾಟಕ ರತ್ನ'** ಪ್ರಶಸ್ತಿಯನ್ನು ಧರ್ಮಸ್ಥಳದ ಧರ್ಮಾಧಿಕಾರಿ **ಡಾ. ವೀರೇಂದ್ರ ಹೆಗ್ಗಡೆ**ಯವರಿಗೆ ಸಮಾಜಸೇವೆ ಮತ್ತು ಗ್ರಾಮೀಣಾಭಿವೃದ್ಧಿ (೧೪-೦೧-೨೦೧೦) ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ. ನೀಡುವುದಾಗಿ ಕರ್ನಾಟಕ ಸರ್ಕಾರ ಘೋಷಿಸಿದೆ.

ಮೇಲ್ಕಂಡ ಎಲ್ಲಾ ಸನ್ಮಾನ್ಯರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾರ್ದಿಕ ಅಭಿನಂದನೆಯೊಡನೆ ಶುಭಾಶಯ ಕೋರುತ್ತದೆ.

ಶ್ರದ್ಧಾಂಜಲಿ

(೧) **೨೭-೦೯-೨೦೦೯**: ಹಿರಿಯ ನಾಟಕಕಾರ, ಸಾಹಿತಿ, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ **ವಿ.ಟಿ. ಹೆಗಡೆ ಶೀಗೆ ಹಳ್ಳಿ**(೮೧) ನಿಧನರಾದರು ಇವರನ್ನು ಕನ್ನಡ ಸಾಹಿತ್ಯ ಪರಿಷತ್ತು (೧೯೭೬); ಅಖಿಲ ಕರ್ನಾಟಕ ಜ್ಯೋತಿರ್ವಿಜ್ಞಾನ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದ್ದವು. ಇವರು 'ನಮ್ಮೂರ ಮಂದಾರಹೂವೆ' ಚಿತ್ರದಲ್ಲೂ ಪಾತ್ರವಹಿಸಿದ್ದರು.

(೨) **೨೯-೧೦-೨೦೦೯** : ಯಕ್ಷಗಾನದ ಮೇರುಕಲಾವಿದ **ಕೆರೆಮನೆ ಮಹಾಬಲ ಹೆಗಡೆ** (೮೩) ದೈವಾಧೀನರಾದರು.

(೩) **೧೫-೧೨-೨೦೦೯**: ಖ್ಯಾತ ಪತ್ರಕರ್ತ, ಸಾಹಿತಿ **ಬೇಲೂರು ಕೃಷ್ಣಮೂರ್ತಿ** (೭೭) ನಿಧನರಾದರು. ಇವರು ಪ್ರಜಾವಾಣಿ ಪತ್ರಿಕೆಯಲ್ಲಿ ೪೦ ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರು. ಇವರು ೬೦ಕ್ಕೂ ಹೆಚ್ಚು ಜನಪ್ರಿಯ ನಾಟಕಗಳನ್ನು ರಚಿಸಿದ್ದಾರೆ.

(೪) **೨೯-೧೨-೨೦೦೯**: ಗಾನಗಾರುಡಿಕ ಸಿ. **ಅಶ್ವತ್ಥರು** ಬೆಂಗಳೂರಿನಲ್ಲಿ ನಿಧನರಾದರು

(೫) ೩೦-೧೨-೨೦೦೯ : ಸಾಹಸಸಿಂಹ **ಡಾ. ವಿಷ್ಣುವರ್ಧನ್** ಮೈಸೂರಿನಲ್ಲಿ ನಿಧನರಾದರು. ಇವರ ಜೀವಿತಕಾಲ ೧೯೫೦-೨೦೦೯. ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ವೈವಿಧ್ಯ ಪೂರ್ಣ ಪಾತ್ರಗಳನ್ನು ಅಭಿನಯಿಸಿ ಅತ್ಯಂತ ಜನಪ್ರಿಯ ರಾಗಿದ್ದರು.

ಮೇಲ್ಕಂಡ ಎಲ್ಲಾ ದಿವಂಗತರುಗಳಿಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಗೌರವಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ

ಸಾದರಸ್ವೀಕಾರ

ಪುಸ್ತಕದ ಹೆಸರು ಪ್ರಕಾಶಕರ ಹೆಸರು ಮತ್ತು ವಿಳಾಸ

ದೀಪ : ಶ್ರೀ ಟಿ.ವಿ. ವೆಂಕಟರಮಣಯ್ಯ, ಬೆಂಗಳೂರು, ವಿಶ್ವವಿದ್ಯಾಲಯ, ಪ್ರಕಟಣೆ : 2009 ಪುಟ : ,ಬೆಲೆ : 32/-

ಮಹಾಭಾರತ ಕಾಲದ ಸಮಾಜ ಮತ್ತು ರಾಜ್ಯಧರ್ಮ : ಲೇಖಕ : ಪ್ರೊ. ಕೆ.ಎಸ್. ಕೃಷ್ಣಮೂರ್ತಿ, ರಾಷ್ಟ್ರೀಯ ರಾಜಕೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಪುಟ : ೫೨, ಬೆಲೆ : ೪೦/-.

ರಾಜಕೀಯ ಮತ್ತು ಸಮಾಜ : ಲೇಖಕ : ಡಾ. ಎಚ್.ಎಂ. ಮರುಳಸಿದ್ಧಯ್ಯ, ರಾಷ್ಟ್ರೀಯ ರಾಜಕೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಪುಟ : ೪೪, ಬೆಲೆ : ೩೦/-.

ತೇರನೇರಿದ ಚೆನ್ನಿ : ಲೇಖಕ : ವಿದ್ಯಾಧರ ಮುತಾಲಿಕ ದೇಸಾಯಿ, ಪ್ರಕಾಶನ : ಮುಂಬೆಳಕು, ಕನ್ನಡ ಬಳಗ, ವರ್ಷ : ೨೦೦೯, ಪುಟ: ೯೪, ಬೆಲೆ : ೯೦/-.

ಲಾಡ್ ಜನಾಂಗದ ನೆಲೆ ಹಾಗೂ ಸಂಸ್ಕೃತಿ : ಲೇಖಕ : ಜಯಪ್ರಕಾಶ್ ಲಾಡ್ ಎನ್.ಡಿ, ಕನ್ನಡ ಪುಸ್ತಕ ಪ್ರಾಧಿಕಾರ, ವರ್ಷ : ೨೦೦೯, ಪುಟ : ೧೩೮, ಬೆಲೆ : ೫೮/-

ಅಭಿಮುಖ : ಲೇಖಕ : ಶ್ರೀರಾಮಭಟ್ಟ, ಮೆ॥ ಪಾಂಚಜನ್ಯ ಪ್ರಕಾಶನ, ವರ್ಷ : ೨೦೦೫, ಪುಟ : ೧೬೪, ಬೆಲೆ : ೧೦೦/-

ಶ್ರೀಕೃಷ್ಣದೇವರಾಯ ವಿರಚಿತೆ – ಜಾಂಬುವತೀ ಪರಿಣಯ : ಅನುವಾದ, ದ್ರಾವಿಡ ವಿಶ್ವವಿದ್ಯಾಲಯ, ವರ್ಷ : ೨೦೦೮, ಪುಟ : ೧೯೪, ಬೆಲೆ : ೧೦೦/-

ನಿತ್ಯಪಠಣೆಯ ಹಾಡುಗಳು : ಲೇಖಕ : ಶ್ರೀಲಕ್ಷ್ಮೀರಾವ್ ಕೆ.ಪಿ., ಪ್ರಕಾಶನ : ಶ್ರೀಮತಿ ಶ್ರೀಲಕ್ಷ್ಮೀರಾವ್ ಕೆ.ಪಿ, ಬೆಂಗಳೂರು, ವರ್ಷ : ೨೦೦೯, ಪುಟ : ೧೦೦, ಬೆಲೆ : ೧೮೦/-

ಬಂಗಾರದ ಹುಡುಗಿ : ಲೇಖಕ : ಸಿ. ರಮೇಶ್ ಹೊಸದೊಡ್ಡಿ, ಪ್ರಕಾಶನ : ನಮ್ಮ ಜನರವಾಣಿ, ವರ್ಷ : ೨೦೦೯, ಪುಟ : ೬೪, ಬೆಲೆ : ೪೦-

ಬಿಂದು : ಲೇಖಕ : ಶ್ರೀ ಪ್ರಭಾಮೂರ್ತಿ, ಪ್ರಕಾಶನ : ಪ್ರಭಾಮೂರ್ತಿ, ವರ್ಷ : ೨೦೦೫, ಪುಟ : ೧೫, ಬೆಲೆ : ೯೫/-

ಮಾತು-ಮುತ್ತು : ಲೇಖಕ : ಪರಮೇಶ್ವರಪ್ಪ ಕುದರಿ, ಹರಿ ಪ್ರಕಾಶನ, ವರ್ಷ : ೨೦೦೯, ಪುಟ : ೬೪, ಬೆಲೆ : ೬೪/-

ಹಳ್ಳಿಚಿತ್ರ : ಲೇಖಕ : ಬೆಳಗೆರೆಕೃಷ್ಣಶಾಸ್ತ್ರೀ, ಬೆಳಗೆರೆ ಪ್ರಕಾಶನ, ವರ್ಷ : ೧೯೬೬, ಪುಟ ; ೧೫೨, ಬೆಲೆ : ೬೦/-

ಇಂದು ಎಂಥ ಜೀವನವಯ್ಯ : ಸಂಪಾದಕರು : ಡಾ. ಎಂ.ವಿ. ಶೀನಿವಾಸ್, ಕೃಷ್ಣಮೂರ್ತಿ ಹನೂರು, ಭಾವನಾ ಪ್ರಕಾಶನ, ವರ್ಷ : ೨೦೦೩, ಪುಟ : ೧೨೧, ಬೆಲೆ : ೭೫/-

ಸಾಹಿತಿಗಳಸ್ಮೃತಿ : ಲೇಖಕ : ಬೆಳಗೆರೆ ಕೃಷ್ಣಶಾಸ್ತ್ರೀ, ಪ್ರಕಾಶನ : ಅಭಿನವ ಪ್ರಕಾಶನ,ಬೆಂಗಳೂರು, ವರ್ಷ : ೧೯೯೩, ಪುಟ : ೨೦೦, ಬೆಲೆ : ೧೦೦/-

ದಾನಿಗಳು

ಎಂ.ವಿ.ಸೀ. ಶತಮಾನೋತ್ಸವ ನಿಧಿ :

೧)	ರತ್ನ ಎನ್. ರಾವ್, ಪುಣೆ	೨೫,೦೦೦-೦೦
೨)	ಕರ್ನಾಟಕ ನಾಟಕ ಅಕಾಡೆಮಿ (ಗೌರವ ಧನ)	೫,೦೦೦-೦೦
೩)	ಡಾ. ನಾ. ಗೀತಾಚಾರ್ಯ	೨೦೦-೦೦
೪)	ಕಮಲಿನಿ ಬಾಲುರಾವ್, ದೆಹಲಿ	೧೦,೦೦೦-೦೦
೫)	ಸೂರ್ಯನಾಥ ಕಾಮತ್, ಬೆಂ.	೧,೦೦೦-೦೦
೬)	ಟಿ.ವಿ. ನಾಗರಾಜ, ಬೆಂ.	೪,೫೦೦-೦೦
೭)	ಎಸ್.ಎನ್. ಮೂರ್ತಿ, ಬೆಂ.	೨೦೦-೦೦
೮)	ಕನ್ನಡ ಗೆಳೆಯರ ಬಳಗ, ಬೆಂ.	೧,೦೦೦-೦೦
೯)	ಡಾ.ಕೆ.ಪಿ. ಭಟ್, ಬೆಂ.	೨೦೦-೦೦
೧೦)	ಹಾಲ್ದೊಡ್ಡೇರಿ, ಬೆಂ.	೨೦೦-೦೦
೧೧)	ಜಯಪ್ರಕಾಶ ನಾರಾಯಣ, ಬೆಂ.	೨೦೦-೦೦
೧೨)	ಡಾ. ಪಿ.ವಿ. ನಾರಾಯಣ	೨೦೦-೦೦
೧೩)	ಕನ್ನಡ ಶ್ರೀಸಾಮಾನ್ಯರ ಕೂಟ, ಬೆಂ.	೫೦೦-೦೦
೧೪)	ಕೇಂದ್ರಿಯ ಸದನ ಕನ್ನಡ ಸಂಘ, ಬೆಂ.	೧,೦೦೦-೦೦
೧೫)	ಚಂದ್ರಶೇಖರ ಚಡಗ, ಬೆಂ.	೧,೦೦೦-೦೦
೧೬)	ನಾಗೇಶ್, ಎ. ಬೆಂ.	೧೦೦-೦೦
೧೭)	ಕೆ. ವಾದಿರಾಜು, ಬೆಂ.	೧,೦೦೧-೦೦

ತೆರೆದ-ಅಂಚೆ

ಅಚ್ಚಾದ ಪುಸ್ತಕ

ಶ್ರೀಮತಿ/ಶ್ರೀ...

....

....

ವಿಳಾಸ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ

ನರಸಿಂಹರಾಜ ಕಾಲೋನಿ

ಬೆಂಗಳೂರು – ೧೯

ದೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು – ೨೬ ✆ : ೨೬೭೫೭೮೯೫

'ವಾರ್ತಾಪತ್ರ' ಪ್ರಾಯೋಜಕರು: ಇಳಾ ಮುದ್ರಣ, ಬೆಂಗಳೂರು-೨೬.